ನಿಮ್ಮೊಡನೆ

# ಹಿರಿಯರ ನೆಮ್ಮದಿ ಕದಡಬೇಡಿ

ನಮ್ಮಲ್ಲೀಗ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎನ್ನುವುದು ನಿಜ. ಈ ಹಿನ್ನೆಲೆಯಲ್ಲಿ ಹಿರಿಯರನ್ನು ಮನೆಯಿಂದ ಬೇರೆಡೆಗೆ ಸಾಗ ಹಾಕುವುದು, ವೃದ್ಧಾಶ್ರಮಗಳಿಗೆ ತಳ್ಳುವುದೂ ನಡೆದಿದೆ. ಇಳಿವಯಸ್ಸಿನಲ್ಲಿ ಹಿರಿಯರಿಗೆ ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿ- ವಾತ್ಸಲ್ಯ ಬೇಕಾಗುತ್ತದೆ.

ಏರುತ್ತಿರುವ ಜೀವನ ವೆಚ್ಚ ಮತ್ತು ಕಡಿಮೆಯಾಗುತ್ತಿರುವ ಪ್ರೀತಿ- ವಾತ್ಸಲ್ಯಗಳು ಇತ್ತೀಚೆಗೆ ಜನರ ಜೀವನವನ್ನು ದುರ್ಭರಗೊಳಿಸಿವೆ. ಅದರಲ್ಲೂ ವೃದ್ಧರ ಜೀವನ ಇನ್ನಷ್ಟು ದುರ್ಭರವಾಗಿದೆ. 'ಹೆಲ್ಪೇಜ್ ಇಂಡಿಯಾ' ಸಂಸ್ಥೆಯು ಇತ್ತೀಚೆಗೆ ಬಹಿರಂಗ ಪಡಿಸಿರುವ ಸಮೀಕ್ಷೆಯ ಫಲಿತಾಂಶದ ಪ್ರಕಾರ, ಭಾರತದಲ್ಲಿ ಹಿರಿಯರನ್ನು ಅವಮಾನಿಸುವ, ಬೈಯುವ ಪ್ರವೃತ್ತಿ ತೀವ್ರವಾಗಿ ಏರುತ್ತಿದೆ. ಸುಮಾರು 20 ನಗರಗಳಲ್ಲಿ ಸಂಸ್ಥೆಯು ಈ ಸಮೀಕ್ಷೆ ನಡೆಸಿದ್ದು, ಅದರ ಪ್ರಕಾರ ಭೋಪಾಲ್ ನಗರದಲ್ಲಿ ಶೇಕಡಾ 77ರಷ್ಟು ವೃದ್ಧರು ಕಿರಿಯರಿಂದ ದೌರ್ಜನ್ಯಗಳಿಗೆ ತುತ್ತಾಗುತ್ತಿದ್ದು, ದೇಶದಲ್ಲೇ ಹಿರಿಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಮೊದಲ ಸ್ಥಾನದಲ್ಲಿದೆ. ಗುವಾಹಟಿ ಮತ್ತು ಲಖನೌಗಳಲ್ಲೂ ಹಿರಿಯರ ಮೇಲಿನ ದೌರ್ಜನ್ಯ ಹೆಚ್ಚಿದ್ದು ನಂತರದ ಸ್ಥಾನಗಳನ್ನು ಪಡೆದಿವೆ. ಹಿರಿಯರನ್ನು ಬೈಯುವ, ಅವಹೇಳನ ಮಾಡುವ ವಿಷಯದಲ್ಲಿ ಬೆಂಗಳೂರು ನಗರ ಕೂಡಾ ಹಿಂದೆ ಬಿದ್ದಿಲ್ಲ. 20 ನಗರಗಳ ಪೈಕಿ ಬೆಂಗಳೂರು ಈ ನಿಟ್ಟಿನಲ್ಲಿ ಏಳನೆಯ ಸ್ಥಾನ ಪಡೆದಿದೆ. ಬೆಂಗಳೂರಿನಲ್ಲಿ ಶೇಕಡಾ 37ರಷ್ಟು ವೃದ್ಧರು ತಮ್ಮ ಕುಟುಂಬದ ಸದಸ್ಯರಿಂದಲೇ ಅವಹೇಳನಕ್ಕೆ ಈಡಾಗುತ್ತಿದ್ದಾರೆ. ಇಡೀ ದೇಶದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ (ಶೇಕಡಾ 1.7) ಹಿರಿಯರ ಮೇಲಿನ ದೌರ್ಜನ್ಯ ನಡೆಯುತ್ತಿರುವ ನಗರ ಜೈಪುರ ಎನ್ನುವುದು ಆ ನಗರದ ಮಟ್ಟಿಗೆ ಹೆಮ್ಮೆ ಪಡುವಂತಹ ವಿಷಯವೇ. ಈ ಸಾಮಾಜಿಕ ಪಿಡುಗನ್ನು ಪೂರ್ಣವಾಗಿ ಇಲ್ಲವಾಗಿಸುವತ್ತ ಜೈಪುರ ನಗರದ ವಾಸಿಗಳು ಸುಲಭದಲ್ಲಿ ಯಶಸ್ಸು ಹೊಂದಬಹುದು. ಆದರೆ ಉಳಿದ ನಗರಗಳಲ್ಲಿ ಪರಿಸ್ಥಿತಿ ಸುಧಾರಣೆಗೆ ಯಾವ ಕ್ರಮಗಳನ್ನು ಅನುಸರಿಸಲಾಗುತ್ತದೆ ಎನ್ನುವುದು ಚಿಂತನಾರ್ಹ.

ಭಾರತದಲ್ಲಿ ಸುಮಾರು 9 ಕೋಟಿ ಜನ 60 ವರ್ಷ ದಾಟಿದವರು ಇದ್ದಾರೆ ಎನ್ನುವುದು ಒಂದು ಅಂದಾಜು. ಇತ್ತೀಚಿನ ವರ್ಷಗಳಲ್ಲಿ ವೈದ್ಯಕೀಯ ಸೌಲಭ್ಯಗಳ ಗುಣಮಟ್ಟ ವೃದ್ಧಿಸಿರುವ ಹಿನ್ನೆಲೆಯಲ್ಲಿ 85 ವರ್ಷ ದಾಟಿದವರ ಸಂಖ್ಯೆಯೂ ನಮ್ಮಲ್ಲಿ ಹೆಚ್ಚುತ್ತಿದೆ. ಈ ವೃದ್ಧರಲ್ಲಿ ಶೇಕಡಾ 11ರಷ್ಟು ಜನ ಏಕಾಂಗಿಯಾಗಿ ಅಥವಾ ಪರರ ಮನೆಯಲ್ಲಿ ವಾಸವಿದ್ದಾರೆ. 2025ರ ವೇಳೆಗೆ 60 ವರ್ಷ ದಾಟಿದವರ ಸಂಖ್ಯೆ ಜನಸಂಖ್ಯೆಯ ಶೇಕಡಾ 25ಕ್ಕೆ ಏರಲಿದೆ ಎನ್ನುತ್ತದೆ ಸಮೀಕ್ಷೆ. ದೇಶದಲ್ಲಿ ಒಟ್ಟಾರೆ ಶೇಕಡಾ 56ರಷ್ಟು ಹಿರಿಯರು ಮನೆಯಲ್ಲಿ ಸ್ವಂತ ಮಕ್ಕಳಿಂದಲೇ ನಿಂದೆ, ದೂಷಣೆಗೆ ಒಳಗಾಗುತ್ತಿದ್ದಾರೆ ಎಂದು ಸಮೀಕ್ಷೆ ತಿಳಿಸಿದೆ. ಸಮೀಕ್ಷೆಗೆ ಒಳಪಟ್ಟ ವೃದ್ಧರ ಸಂಖ್ಯೆ ಸೀಮಿತವಾದರೂ ಇದೊಂದು ಪ್ರಾತಿನಿಧಿಕ ಅಂದಾಜು ಎನ್ನುವುದು ಖಂಡಿತಾ. ಹೀಗೆ ವೃದ್ಧರ ಮೇಲಿನ ಅಸಹನೆ, ನಿಂದೆ ಹೆಚ್ಚುತ್ತಿರುವುದಕ್ಕೆ ಕಾರಣಗಳನ್ನು ಹುಡುಕಿ ಅವುಗಳನ್ನು ನಿವಾರಿಸುವತ್ತ ಸರ್ಕಾರ ಮಾತ್ರವಲ್ಲ, ಸಾಮಾಜಿಕ ಸಂಘಟನೆಗಳೂ ತುರ್ತು ಗಮನ ಹರಿಸಬೇಕಾದ ಅಗತ್ಯವಿದೆ. ಬಹಳಷ್ಟು ಪ್ರಕರಣಗಳಲ್ಲಿ ಹಿರಿಯರ ಹೆಸರಿನಲ್ಲಿರುವ ಆಸ್ತಿಯೇ ಕಿರುಕುಳಕ್ಕೆ ಕಾರಣ ಎನ್ನುವುದು ಗಮನಿಸಬೇಕಾದ ಸಂಗತಿ.

ನಮ್ಮಲ್ಲೀಗ ಅವಿಭಕ್ತ ಕುಟುಂಬಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎನ್ನುವುದು ನಿಜ. ಈ ಹಿನ್ನೆಲೆಯಲ್ಲಿ ಹಿರಿಯರನ್ನು ಮನೆಯಿಂದ ಬೇರೆಡೆಗೆ ಸಾಗ ಹಾಕುವುದು, ವೃದ್ಧಾಶ್ರಮಗಳಿಗೆ ತಳ್ಳುವುದೂ ನಡೆದಿದೆ. ಇಳಿವಯಸ್ಸಿನಲ್ಲಿ ಹಿರಿಯರಿಗೆ ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿ- ವಾತ್ಸಲ್ಯ ಬೇಕಾಗುತ್ತದೆ. ಕೂಡುಕುಟುಂಬದಲ್ಲಿ ಪ್ರೀತಿಯಿಂದ ನೋಡಿಕೊಂಡರೆ ಆರೋಗ್ಯದ ಸಣ್ಣಪುಟ್ಟ ಸಮಸ್ಯೆಗಳು ತನ್ನಿಂದತಾನೇ ಕಣ್ಮರೆಯಾಗುತ್ತವೆ. ಇದು ನಮಗೆ ಗೊತ್ತಿಲ್ಲದ್ದಲ್ಲ. ಆದರೆ ನಗರೀಕರಣದ ಒತ್ತಡ, ಬೆಲೆಯೇರಿಕೆ, ಲೌಕಿಕ ಬದುಕಿನ ಮೋಹ, ಸಾಮಾಜಿಕ- ಸಾಂಸ್ಕೃತಿಕ ಮೌಲ್ಯಗಳ ಪಲ್ಲಟದಿಂದಾಗಿ ಇಂತಹ ಕುಟುಂಬಗಳ ಸಂಖ್ಯೆ ಕ್ಷೀಣಿಸುತ್ತಿವೆ. ಇದೂ ವೃದ್ಧರ ಸಮಸ್ಯೆಗಳು ಹೆಚ್ಚಲು ಕಾರಣವಾಗಿದೆ.

ಕುಟುಂಬದ ಮಧ್ಯೆ ವಾಸವಿರುವ ವೃದ್ಧರಲ್ಲೂ ಏಕಾಂಗಿತನದ ಭಾವ ಹೆಚ್ಚುತ್ತಿದೆ ಎಂದು ಇನ್ನೊಂದು ಸಮೀಕ್ಷೆ ತಿಳಿಸಿದೆ. ಏರುತ್ತಿರುವ ವಯಸ್ಸು ಸಹಜವಾಗಿಯೇ ಒಬ್ಬಂಟಿತನದ ಭಾವವನ್ನು ಉದ್ದೀಪಿಸುತ್ತದೆ. ಇದನ್ನು ಎದುರಿಸಲು ವೃದ್ಧರಿಗೆ ಮಾನಸಿಕ ಬೆಂಬಲ ನೀಡುವ ಕ್ರಮಗಳು ಮುಖ್ಯವಾಗುತ್ತವೆ. ಅವರ ಮಾತುಗಳನ್ನು ಕೇಳಿಸಿಕೊಳ್ಳುವ, ಪ್ರೀತಿಯಿಂದ ಉತ್ತರಿಸುವ ತಾಳ್ಮೆಯನ್ನು ಕುಟುಂಬದ ಸದಸ್ಯರು ಬೆಳೆಸಿಕೊಳ್ಳಬೇಕು. ವೃದ್ಧರು ನೆಮ್ಮದಿಯಿಂದ ವಾಸಿಸುವ ಸಮಾಜಗಳು ಇಡೀ ದೇಶದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಹೆಚ್ಚಿಸುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಅಂತಹ ವಾತಾವರಣವನ್ನು ಈಗಿನ ಯುವಪೀಳಿಗೆ ರೂಪಿಸಿದರೆ, ಮುಂದೆ ಅವರ ಇಳಿಗಾಲದಲ್ಲಿ ಅದೇ ವ್ಯವಸ್ಥೆ ಅವರ ಜೀವನವನ್ನೂ ಸಹನೀಯಗೊಳಿಸುತ್ತದೆ ಎನ್ನುವುದನ್ನು ಮರೆಯಬಾರದು.

■ ಬಿ.ಎಂ.ಹನೀಫ್

